**Com.O.S 146/2023**

**PW-1**

**ಸಾಕ್ಷಿಯನ್ನು ದಿನಾಂಕ 30.6.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿ ಪರ ಶ್ರೀ ಎನ್.ಎಸ್ ವಕೀಲರಿಂದಃ</u>**

1 ರಿಂದ 3 ನೇ ಪ್ರತಿವಾದಿಯರು 4 ನೇ ಪ್ರತಿವಾದಿಯ ವಿರುದ್ಧದ ಪ್ರಕರಣ ನಡೆಸಲು ಹಣ ಬೇಕಾದ್ದರಿಂದ ದಾವ ಆಸ್ತಿಯನ್ನು ಮಾರಾಟ ಮಾಡುವುದಾಗಿ ನನಗೆ 2018 ರ ಜುಲೈನಲ್ಲಿ ತಿಳಿಸಿದ್ದರು. ಆ ಕಾಲಕ್ಕೆ ಹಣ ನೀಡಿ ಎಂ.ಓ.ಯು ಮಾಡಿಕೊಳ್ಳಲು ತೊಂದರೆ ಇರಲಿಲ್ಲ. 1 ರಿಂದ 3 ನೇ ಪ್ರತಿವಾದಿಯರು ನನ್ನನ್ನು ಜುಲೈ 2018 ರಲ್ಲಿ ಭೇಟಿ ಮಾಡಿಲ್ಲ ಮತ್ತು ದಾವಆಸ್ತಿಯನ್ನು ಮಾರಾಟ ಮಾಡುವುದಾಗಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. 2012 ರಿಂದಲೇ 1 ರಿಂದ 3 ನೇ ಪ್ರತಿವಾದಿಯರು 4 ನೇ ಪ್ರತಿವಾದಿಯ ವಿರುದ್ಧದ ಪ್ರಕರಣವನ್ನು ನನ್ನಿಂದ ಯಾವುದೇ ಹಣದ ಸಹಾಯವಿಲ್ಲದೆ ನಡೆಸುತ್ತಿದ್ದರು ಎಂದರೆ ನಿಜ. ಜುಲೈ ತಿಂಗಳಿನಲ್ಲಿ 1 ರಿಂದ 3 ನೇ ಪ್ರತಿವಾದಿಯರು ಮಧ್ಯವರ್ತಿ ಮೂಲಕ ನನಗೆ ದಾವ ಆಸ್ತಿಯನ್ನು ಮಾರಾಟ ಮಾಡುವುದಾಗಿ ತಿಳಿಸಿದರು. ಎಂ.ಓ.ಯು ಮೊದಲು ನನ್ನ ಹಾಗೂ 1 ರಿಂದ 3 ನೇ ಪ್ರತಿವಾದಿಯರ ನಡುವೆ ಎರಡು ಬಾರಿ ಮಾತುಕತೆ ನಡೆದಿತ್ತು. 2018 ರ ಜುಲೈನಲ್ಲಿ ಆ ಮಾತುಕತೆ ನಡೆದಿತ್ತು ಮತ್ತು ಆಗಲೇ ಒಪ್ಪಂದಕ್ಕೆ ಬಂದಿದ್ದೆವು. ಆದರೆ ಜುಲೈನಲ್ಲಿ ಎಂ.ಓ.ಯು ಮಾಡಿಕೊಂಡಿರಲಿಲ್ಲ. ಜುಲೈನಲ್ಲಿ ಹಣ ನೀಡಿ ಎಂ.ಓ.ಯು ಮಾಡಿಕೊಳ್ಳಲು ತೊಂದರೆ ಇರಲಿಲ್ಲ. ಜುಲೈ 2018 ರಲ್ಲಿ 1 ರಿಂದ 3 ನೇ ಪ್ರತಿವಾದಿಯರು ನನ್ನನ್ನು ಭೇಟಿ ಮಾಡಿಲ್ಲ ಮತ್ತು ಮಾರಾಟದ ಬಗ್ಗೆ ಚರ್ಚೆ ಮಾಡಿಲ್ಲ ಎಂದರೆ ಸರಿಯಲ್ಲ. 16.11.2018 ರಂದು ಸಿ.ಓ.ಎಸ್ 12/2022 ಮತ್ತು 13/2022 ಬಾಕಿ ಇದ್ದವು ಎಂದರೆ ಸಿವಿಲ್ ನ್ಯಾಯಾಲಯದಲ್ಲಿ ಬಾಕಿ ಇದ್ದವು. ಆ ದಾವೆಗಳು ಬಾಕಿ ಇದುದ್ದರಿಂದ

ಎಂ.ಓ.ಯು ಮಾಡಿಕೊಂಡಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 16.11.2018 ರಂದು ಬೆಂಗಳೂರಿನಲ್ಲಿ ಎಂ.ಓ.ಯು ಮಾಡಿಕೊಂಡಿದ್ದೆವು. ಎಂ.ಓ.ಯು ನ್ನು 2 ನೇ ಪ್ರತಿವಾದಿಯು ತಯಾರಿಸಿದ್ದರು. ನಿಪಿ5 ನಾನು ಸೃಷ್ಟಿ ಮಾಡಿದ ದಾಖಲೆ ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಗಳು ನನ್ನಿಂದ ಸಾಲ ಪಡೆದಿದ್ದರು ಎಂದರೆ ಸರಿಯಲ್ಲ. ಆ ಸಾಲದ ಭದ್ರತೆಗೆ ದಾಖಲೆ ಬೇಕೆಂದು ನಾನು ನಿಪಿ5 ನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ5 ರ ಮೊದಲ ಪುಟದಲ್ಲಿ ಕನಸಿಡರೇಶನ್ ಪ್ರೈಸ್ 0 ಎಂದು ಇದೆ ಎಂದರೆ ನಿಜ. ಹಣ ನೀಡಿದ 3 ದಿನಗಳ ಬಳಿಕ ನಿಪಿ5 ದಾಖಲೆಯನ್ನು ಮಾಡಿಕೊಟ್ಟಿರುತ್ತಾರೆ. ನಿಪಿ5 ಕ್ಕಿಂತ 3 ದಿನಗಳ ಮೊದಲು 10 ಲಕ್ಷ ಹಣವನ್ನು ನೀಡಿದ್ದೆ. ನಿಪಿ5 ರಲ್ಲಿ ಹಣವನ್ನು 3 ದಿನಗಳ ಮೊದಲು ನೀಡಿದ ಬಗ್ಗೆ ನಮೂದು ಇಲ್ಲ. ವಾದಪತ್ರದಲ್ಲಿ ಯಾವ ಬ್ಯಾಂಕ್ ಹಣ ಪಾವತಿಸಿದ್ದೇನೆ ಎಂದು ನಮೂದು ಇರುವುದಿಲ್ಲ ಎಂದರೆ ನಿಜ. ಸಾಕ್ಷಿ ಸ್ವತಃ ಹೇಳುತ್ತಾರೆ ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದೇನೆ. ನಿಪಿ10 ದಾಖಲೆಯಲ್ಲಿ 13.11.2018 ರಂದು 10 ಲಕ್ಷ ನೀಡಿದ ಬಗ್ಗೆ ನಮೂದು ಇದೆ. ಆ ಹಣವನ್ನು ಸಾಲವಾಗಿ ನೀಡಿದ್ದೆ ಎಂದರೆ ಸರಿಯಲ್ಲ. 6.12.2018 ರಂದು ಪುನಃ 10 ಲಕ್ಷ ಹಣವನ್ನು ನಗದಾಗಿ ಪಾವತಿ ಮಾಡಿರುತ್ತೇನೆ. ನಿಪಿ9 ನ್ನು ನಾನೇ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ9 ರಲ್ಲಿ ನ್ಯಾನ್ಸಿ ಅಂಡ್ರ್ಯೂಸ್ ನವರ ಸಹಿ ಕೆಳಗಿನ ದಿನಾಂಕವನ್ನು ನಾನೇ ಬರೆದಿರುತ್ತೇನೆ ಎಂದರೆ ಸರಿಯಲ್ಲ. ಬೆನ್ನಿ ಅಂಡ್ರೂಸ್‌ಗೆ ದಿನಾಂಕ 13.11.2018 ರಂದು ಪಾವತಿಸಿದ್ದ 10 ಲಕ್ಷವನ್ನು ಬಿಟ್ಟರೆ ಬೇರೆ ಯಾವತ್ತು 1 ರಿಂದ 3 ನೇ ಪ್ರತಿವಾದಿಗೆ ಹಣ ಪಾವತಿಸಿಲ್ಲ ಎಂದರೆ ಸರಿಯಲ್ಲ. ವಾದಪತ್ರದಲ್ಲಿ 6.12.2018 ರಂದು ಹಣ ಪಾವತಿಸಿದ ಬಗ್ಗೆ ದಿನಾಂಕ ನಮೂದಿಸಿಲ್ಲ ಎಂದರೆ ಇರಬಹುದು. ನಿಪಿ9 ದಾಖಲೆಯು ಆ ಕಾಲಕ್ಕೆ ಇರಲಿಲ್ಲವಾದ್ದರಿಂದ ದಿನಾಂಕ ತಿಳಿಸಿಲ್ಲ ಎಂದರೆ ಸರಿಯಲ್ಲ. ಪುನಃ 2 ಲಕ್ಷವನ್ನು ಸ್ಟ್ಯಾಂಪ್ ಡ್ಯೂಟಿ ಹಾಗೂ

ವಕೀಲರ ಖರ್ಚಿಗೆ ನೀಡಿದ್ದೇನೆ, ಆದರೆ ದಿನಾಂಕ ನೆನಪಿಲ್ಲ. ನಾನು ಬೇರೆ ವ್ಯಕ್ತಿಗಳ ವಿರುದ್ಧ ಹಲವಾರು ಪ್ರಕರಣ ಹೊಂದಿರುತ್ತೇನೆ ಎಂದರೆ ನಿಜ. ನಿಪಿ10 ರಲ್ಲಿ ದಿನಾಂಕ 5.3.2021 ರಂದು 10,002-95 ರೂ. ಮತ್ತು 25.8.2022 ರಂದು 50,008-85 ರೂ ಪಾವತಿ ಆಗಿದೆ ಎಂದರೆ ಬ್ಯಾಂಕ್ ಚಾರ್ಜ ಸೇರಿ ಅಷ್ಟು ಆಗಿದೆ. ಬ್ಯಾಂಕ್ ವರ್ಗಾವಣೆ ಮಾಡಿದಾಗ ಹಣ ಪಡೆದವರಿಗೆ ಯಾವ ಚಾರ್ಜಸ್ ಹಾಕುವುದಿಲ್ಲ ಎಂದರೆ ನಿಜ. ನಾನು ರಾಮಚಂದ್ರ ಎಂಬ ವಕೀಲರಿಗೆ ಮಾತ್ರ ಕಳುಹಿಸಿರುತ್ತೇನೆ. ನಿಪಿ10 ರ ಕೊನೆಯ ಪುಟದಲ್ಲಿ 16.10.2019 ರಂದು ಶಂಕರ ನಾರಾಯಣ ಎಂಬ ವಕೀಲರಿಗೆ ಹಣ ಕಳುಹಿಸಿದ ಬಗ್ಗೆ ನಮೂದು ಎಂದರೆ ನಿಜ. ಸಾಕ್ಷಿ ಸ್ವತಃ ಹೇಳುತ್ತಾರೆ ಅದು ಈ ಪ್ರಕರಣಕ್ಕೆ ಸಂಬಂಧಿಸಿಲ್ಲ. ಪ್ರತಿವಾದಿಗಳಿಗೆ ಸಂಬಂಧಪಟ್ಟಂತೆ ಸಿ.ಓ.ಎಸ್ 12/2022 ಮತ್ತು 13/2022 ಮತ್ತು ಈ ಪ್ರಕರಣ ಬಿಟ್ಟರೆ ಬೇರೆ ಪ್ರಕರಣ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ10 ರಲ್ಲಿ 9.10.2019 ರಂದು ಪಾವತಿಸಿದ 57,750/- ರೂ. ಹಣ ಯಾವ ಪ್ರಕರಣಕ್ಕೆ ಸಂಬಂಧಿಸಿರುತ್ತದೆ ಎಂದರೆ ಬೆನ್ನಿ ಆಂಡ್ರೂಸ್ ರವರಿಗೆ ಸಂಬಂಧಪಟ್ಟಿದೆ, ಆದರೆ ಪ್ರಕರಣದ ಸಂಖ್ಯೆ ನೆನಪಿರುವುದಿಲ್ಲ. ಆ ಹಣ ಪ್ರತಿವಾದಿಗಳಿಗೆ ಸಂಬಂಧಪಟ್ಟ ಯಾವುದೇ ಪ್ರಕರಣಕ್ಕೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ನಾನು ಬೇರೆ ಪ್ರಕರಣಕ್ಕೆ ಹಣ ಪಾವತಿಸಿ ಪ್ರತಿವಾದಿಗಳ ಪ್ರಕರಣಕ್ಕೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಮೊಮ್ಮಗಳಿಂದ ಅವರು ಲೋಕ ಅದಾಲತ್‌ನಲ್ಲಿ ರಾಜಿ ಮಾಡಿಕೊಳ್ಳಲು ಪ್ರಯತ್ನ ಮಾಡಿರುವ ಬಗ್ಗೆ ಗೊತ್ತಾಗಿದೆ ಆ ಬಗ್ಗೆ ವಾದಪತ್ರದಲ್ಲಿ ಹೇಳಲು ತೊಂದರೆ ಇರಲಿಲ್ಲ. ಅವರು ಕಳುಹಿಸಿದ ವಾಟ್ಸಪ್ ಮೇಸೆಜ್ ಹಾಜರುಪಡಿಸಲು ತೊಂದರೆ ಇರಲಿಲ್ಲ. ಪ್ರತಿವಾದಿಗಳ ಕುಟುಂಬದವರು ಓ.ಎಸ್ 12/2022 ಮತ್ತು 13/2022 ಪ್ರಕರಣಗಳ ವಿಚಾರವನ್ನು ನನಗೆ ತಿಳಿಸುತ್ತಿದ್ದರು ಮತ್ತು ನಾನು ಸಹ ಫಾಲೋ ಮಾಡುತ್ತಿದ್ದೆ. 4 ನೇ ಪ್ರತಿವಾದಿ ಜೊತೆ

ರಾಜಿ ಮಾಡಿಕೊಳ್ಳಲು ಪ್ರಯತ್ನ ಮಾಡಿದ ಬಗ್ಗೆ ನನಗೆ ತಿಳಿದಾಗ ನನಗೆ ಆ ಬಗ್ಗೆ ನೋಟಿಸ್ ನೀಡಲು ಸಮಯ ಇರಲಿಲ್ಲ, ಆದರೆ ನ್ಯಾಯಾಲಯಕ್ಕೆ ಹಾಜರಾಗಿದ್ದೆ. ಅವರು ಲೋಕ ಅದಾಲತ್‌ಗೆ ಹೋಗುವ 2-3 ದಿನಗಳ ಮೊದಲು ನನಗೆ ಸಂಶಯ ಬಂದಿತ್ತು. ಆ ಕಾಲಕ್ಕೆ ನಾನು 1 ರಿಂದ 3 ನೇ ಪ್ರತಿವಾದಿ ಜೊತೆ ಮಾತುಕತೆ ಮಾಡಲು ಪ್ರಯತ್ನಿಸಿದ್ದೆ, ಆದರೆ ಅವರು ಮಾತುಕತೆಗೆ ಸ್ಪಂದಿಸಲಿಲ್ಲ. ಆ ಬಗ್ಗೆ ವಾದಪತ್ರದಲ್ಲಿ ಹೇಳಲು ತೊಂದರೆ ಇರಲಿಲ್ಲ. ನನ್ನಿಂದ ಪಡೆದ ಸಾಲ ಮರು ಪಾವತಿಸಲು ಮತ್ತು ಬೇರೆಯ ಅವಶ್ಯಕತೆಯ ಕಾರಣಕ್ಕೆ 1 ರಿಂದ 3 ನೇ ಪ್ರತಿವಾದಿಯರು 4 ನೇ ಪ್ರತಿವಾದಿಗೆ ಮಾರಾಟ ಮಾಡುವ ಸಲುವಾಗಿ ಪ್ರಕರಣವನ್ನು ಲೋಕ ಅದಾಲತ್ ಮುಂದೆ ಹಾಕಿಸಿಕೊಂಡಿದ್ದರು ಎಂದರೆ ಸರಿಯಲ್ಲ. ನಿಪಿ5 ರ ಸ್ಟಾಂಪನ್ನು ನಾನೇ 100/- ರೂ.ಗೆ ಪಡೆದಿದ್ದೆ ಎಂದರೆ ನಿಜ. ಅವರ ಮೇಲೆ ಸಂಶಯ ಇದ್ದರಿಂದ ನಂತರ ನಾನು ಹೆಚ್ಚಿನ ಮುದ್ರಾಂಕ ಶುಲ್ಕ ಪಾವತಿಸಿದ್ದೆ. 2.2.2023 ರಂದು ಹೆಚ್ಚಿನ ಮುದ್ರಾಂಕ ಶುಲ್ಕ ಪಾವತಿಸಿದ್ದೇನೆ ಎಂದರೆ ನಿಜ. 20.2.2023 ರಂದು ಪ್ರತಿವಾದಿಗಳಿಗೆ ನೋಟಿಸ್ ನೀಡಲು ತೊಂದರೆ ಇರಲಿಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ಅವರು ನನ್ನೊಂದಿಗೆ ಮಾತುಕತೆಯಲ್ಲಿದ್ದರಿಂದ ನೋಟಿಸ್ ನೀಡಿರಲಿಲ್ಲ. ಪ್ರತಿವಾದಿಗಳಿಗೆ 12 ಲಕ್ಷವನ್ನು ನಗದಾಗಿ ಪಾವತಿ ಮಾಡಿದ ಬಗ್ಗೆ ನನ್ನ ಆದಾಯ ತೆರಿಗೆ ರಿಟರ್ನನಲ್ಲಿ ನಮೂದು ಇದೆ. ಅದನ್ನು ನ್ಯಾಯಾಲಯಕ್ಕೆ ನೀಡಲು ತೊಂದರೆ ಇಲ್ಲ. ಪ್ರತಿವಾದಿಗಳು ನನಗೆ 4,87,08,000/- ರೂ.ಗಳಿಗೆ ಮಾರಾಟ ಮಾಡಲು ಒಪ್ಪಿದ ನಂತರ 4 ನೇ ಪ್ರತಿವಾದಿಯ ಜೊತೆ 4,28,00,000/- ಗಳಿಗೆ ಮಾರಾಟ ಮಾಡಲು ರಾಜಿ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಾನು ಬಾಕಿ ಹಣವನ್ನು ಪಾವತಿಸುವ ಸಲುವಾಗಿ ಅರ್ಜಿ ಹಾಕಿಲ್ಲ. ನನ್ನ ಬಳಿ 4.65 ಕೋಟಿ ಇರದಿದ್ದರಿಂದ ಈ ದಾವೆ ಹಾಕಿದ್ದೇನೆ ಎಂದರೆ

ಸರಿಯಲ್ಲ. ಅಷ್ಟು ಹಣ ನನ್ನ ಬಳಿ ಇದ್ದ ಬಗ್ಗೆ ದಾಖಲೆ ಇದೆ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ಪ್ರತಿವಾದಿಗಳಿಗೆ ಮೋಸ ಮಾಡುವ ಸಲುವಾಗಿ ಈ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ5 ದಾಖಲೆ ಸಹಿ ಮಾಡಿದ ಖಾಲಿ ಪೇಪರಿನಲ್ಲಿ ಸೃಷ್ಟಿ ಮಾಡಿದ ದಾಖಲೆ ಎಂದರೆ ಸರಿಯಲ್ಲ. ಒಬ್ಬ ಮಂಜುನಾಥ ಎಂಬುವವರು ನನಗೆ ಪ್ರತಿವಾದಿಯರ ಆಸ್ತಿಯನ್ನು ತೋರಿಸಿದರು. 1 ರಿಂದ 3 ನೇ ಪ್ರತಿವಾದಿಯರ ಪರ ಮೊದಲು ಒಬ್ಬ ಬಾಲಾಜಿ ಎಂಬುವವರು ಪ್ರಕರಣ ನಡೆಸುತ್ತಿದ್ದರು ಎಂದರೆ ನಿಜ. ಅವರೇ ಈ ಕೇಸಿನ ಎಲ್ಲ ವ್ಯವಹಾರ ನಡೆಸುತ್ತಿದ್ದರು ಎಂದರೆ ನಿಜ. ಸಿ.ಓ.ಎಸ್ 12/2022 ಮತ್ತು 13/2022 ನ್ನು ಅವರೇ ನೋಡಿಕೊಳ್ಳುತ್ತಿದ್ದರು ಎಂದರೆ ನಿಜ. ಸಾಕ್ಷಿ ಸ್ವತಃ ಹೇಳುತ್ತಾರೆ ಅವರು ನನ್ನ ಹಾಗೂ ಪ್ರತಿವಾದಿ ಕುಟುಂಬಸ್ಥರಿಗೆ ಪರಿಚಯಸ್ಥರು. ನನಗೆ ಮಂಜುನಾಥ ರವರ ಮೂಲಕ ಪ್ರತಿವಾದಿಯರ ಪರಿಚಯವಾಗಿರುತ್ತದೆ. ಬಾಲಾಜಿ ರವರು ಪ್ರಕರಣ ನಡೆಸಲು ಖಾಲಿ ಪೇಪರಿಗೆ 1 ರಿಂದ 3 ನೇ ಪ್ರತಿವಾದಿಯರ ಸಹಿಯನ್ನು ಪಡೆಯುತ್ತಿದ್ದರು ಎಂದರೆ ಸರಿಯಲ್ಲ. ಆ ರೀತಿ ಸಹಿ ಪಡೆದ ಪೇಪರಿನಲ್ಲಿ ಸಿ.ಓ.ಎಸ್ 12/2022 ಮತ್ತು 13/2022 ರಲ್ಲಿ ಅರ್ಜಿ ತಯಾರಿಸಿ ಹಾಕುತ್ತಿದ್ದರು ಎಂದರೆ ಸರಿಯಲ್ಲ. ಆ ರೀತಿ ಸಹಿ ಪಡೆದ ಪೇಪರುಗಳನ್ನು ದುರುಪಯೋಗಪಡಿಸಿಕೊಳ್ಳುತ್ತಾರೆ ಎಂಬ ಕಾರಣಕ್ಕೆ ಬಾಲಾಜಿ ರವರಿಗೆ ನೀಡಿದ್ದ ಅಧಿಕಾರ ಪತ್ರವನ್ನು ರದ್ದುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಅಧಿಕಾರ ಪತ್ರ ರದ್ದುಪಡಿಸಿರುವುದು ಮಾತ್ರ ನಿಜ. ಜನವರಿ 2023 ರಲ್ಲಿ ಆ ರೀತಿ ರದ್ದುಪಡಿಸಿರುತ್ತಾರೆ ಎಂದರೆ ನಿಜ. ಆ ರೀತಿ ರದ್ದುಪಡಿಸಿದ ಬಳಿಕ ನಾನು ಬಾಲಾಜಿ ಜೊತೆ ಶಾಮೀಲಾಗಿ ನಿಪಿ5 ನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನಿಂದ ಪಡೆದ 10 ಲಕ್ಷವನ್ನು ಈಗಲೂ ಮರು ಪಾವತಿಸಲು ಸಿದ್ಧರಿದ್ದಾರೆ ಎಂದರೆ ನಾನು ತಯಾರಿಲ್ಲ. ಪ್ರತಿವಾದಿಗಳು ನನ್ನಿಂದ 22 ಲಕ್ಷವನ್ನು ಪಡೆದಿಲ್ಲ ಮತ್ತು ಎಂ.ಓ.ಯು ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 4 ನೇ ಪ್ರತಿವಾದಿ ಪರ ವಕೀಲರು ಸಮಯ ಕೋರಿ ಅರ್ಜಿ ಸಲ್ಲಿಸಿದ್ದು ಸೂಕ್ತ ಕಾರಣ ಇಲ್ಲದಿದ್ದರಿಂದ ಅರ್ಜಿಯನ್ನು ತಿರಸ್ಕರಿಸಲಾಯಿತು.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.